Indian Journal of History and Archaeology

ISSN (E):2582-225X
VOL-2, ISSUE -2, JULY-AUGUEST, 2020, 70-74

# ತಗಡೂರು ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ

**ಡಾ.ಎಸ್.ಕೆ.ದೇವೇಗೌಡ**

**ಡಾ.ಎಸ್.ಕೆ.ದೇವೇಗೌಡ**
ಸಹಾಯಕಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ಕಲಾ ಕಾಲೇಜು,ಮೈಸೂರು

ಒಂದು ಪ್ರದೇಶ, ಎಲ್ಲ ಕಾಲಕ್ಕೂ ಎಲ್ಲ ಜನರನ್ನು ಅಕರ್ಷಿಸುವುದು ಅದರ ಪೌರಾಣಿಕ ಹಾಗೂ ಚಾರಿತ್ರಿಕವಾದ ಕಾರಣಗಳಿಗಿಂತ ಹೆಚ್ಚಾಗಿ, ಅದರ ವಿಶಿಷ್ಟವಾದ ಭೌಗೋಳಿಕ ಕಾರಣಗಳಿಗಾಗಿ, ಚಾರಿತ್ರಿಕ ಮತ್ತು ಪೌರಾಣಿಕವಾದ ಕಾರಣಗಳು ನಮ್ಮ ಕುತೂಹಲವನ್ನು ಬಹಳಕಾಲ ಕಾಯ್ದುಕೊಳ್ಳಲಾರವು. ಏಕೆಂದರೆ, ಅವುಗಳಿಂದ ನಾವು ಪಡೆದುಕೊಳ್ಳುವುದು, ಆಗಲೇ ನಿರ್ಧಾರಿತವಾದ ಅಂಶಗಳಾಗಿರುತ್ತವೆ. ಆದರೆ ಭೌಗೋಳಿಕವಾದ ವೈಶಿಷ್ಟ್ಯತೆ ಹಾಗೆ ಆಗುವುದಿಲ್ಲ. ಏಕೆಂದರೆ ಅದು ನಿತ್ಯವೂ ಹೊಸದಾಗಿಯೇ ಗೋಚರಿಸುವಂತದು; ಹಾಗೆಯೇ ಕಾಲದ ಚಲನೆಯ ಜೊತೆಯಲ್ಲಿಯೇ, ಅದರ ರೂಪವೈವಿಧ್ಯಗಳೂ ವಿಸ್ಮಯವನ್ನು ಉಂಟುಮಾಡುತ್ತಾ ಹೋಗುತ್ತವೆ. ಈ ಹಿನ್ನೆಲೆಯಲ್ಲಿ ನಂಜನಗೂಡು ತಾಲೂಕಿನ ತಗಡೂರು ಗ್ರಾಮವು ಸಹ ತನ್ನದೇ 'ಭೌಗೋಳಿಕತೆ' ಇರುವುದನ್ನು ನಾವು ಗುರ್ತಿಸಬಹುದು. ಹಾಗು ಐತಿಹಾಸಿಕವಾಗಿ,ಧಾರ್ಮಿಕವಾಗಿ ತನ್ನದೇ ಮಹತ್ವ ಪಡೆದುಕೂಂಡಿದ್ದು, ಇಲ್ಲಿ ಲಕ್ಷ್ಮೀನಾರಾಯಣ ದೇವಾಲಯವು ಅತ್ಯಂತ ಪ್ರಮುಖವಾಗಿದೆ.

ಈ ಲಕ್ಷ್ಮೀನಾರಾಯಣ ದೇವಾಲಯವು ತಗಡೂರಿನ ಗ್ರಾಮ ಪಂಚಾಯಿತಿಯ ರಸ್ತೆಯ ಬಲಭಾಗದಲ್ಲಿದೆ. ಇದನ್ನು ಬೆಣಚು ಕಲ್ಲನ್ನು ಉಪಯೋಗಿಸಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದ್ದು, ಇದೊಂದು ಏಕಕೂಟ ದೇವಾಲಯವಾಗಿದೆ. ಇದರಲ್ಲಿ ಒಂದು ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ ಮತ್ತು ಪಾತಾಳಂಕಣಗಳು ಕಂಡು ಬರುತ್ತವೆ. ಅಲ್ಲದೆ

ದೇವಾಲಯದ ಮುಂದೆ ಒಂದು ಮಹಾದ್ವಾರವಿದೆ. ಈ ದೇವಾಲಯವನ್ನು ಹೊಯ್ಸಳ ಶೈಲಿಯಲ್ಲಿದ್ದು. ತರುವಾಯ ಇದನ್ನು ವಿಜಯನಗರದ ಅರಸರು ಜೀರ್ಣೋದ್ಧಾರ ಮಾಡಿಸಿ ಪಾತಾಳಂಕಣ ಮತ್ತು ಮಹಾದ್ವಾರವನ್ನು ಮಾಡಿಸಿದ್ದಾರೆ. ತದನಂತರ ಇತ್ತೀಚೆಗೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ.

**ಗರ್ಭಗೃಹ**: ಗರ್ಭಗೃಹವು ಸು. 8 x 8 ಅಡಿಗಳ ಉದ್ದ ಮತ್ತು ಅಗಲವಾಗಿದೆ. ಇದರ ಮಧ್ಯದಲ್ಲಿ ಸು. ಎರಡು ಅಡಿ ಎತ್ತರವಾಗಿರುವ ನಕ್ಷತ್ರಾಕಾರದ ಗರುಡ ಪೀಠ. ಈ ಪೀಠದ ಮೇಲೆ ಮತ್ತೊಂದು ಅರ್ಧ ಅಡಿ ಎತ್ತರವಿರುವ ಪದ್ಮಪೀಠದ ಮೇಲೆ ಸು. ಐದು ಅಡಿಗಳ ಎತ್ತರವಾಗಿ ಸಮಭಂಗಿಯಲ್ಲಿ ನಿಂತಿರುವ ಲಕ್ಷ್ಮೀನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಚತುರ್ಭುಜವನ್ನು ಹೊಂದಿರುವ ಈ ದೇವನು ಶಂಖ, ಚಕ್ರ, ಗಧಾ, ಪದ್ಮವನ್ನು ಹಿಡಿದುಕೊಂಡಿದ್ದಾನೆ. ಈ ದೇವನ ಮೈಮೇಲೆ ಬಿಡಿಸಲಾಗಿರುವ ವಸ್ತ್ರಾಭರಣ ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಸುಂದರವಾಗಿ ಮೂಡಿಬಂದಿವೆ. ಈ ದೇವನ ಇಕ್ಕೆಲಗಳಲ್ಲಿ ಪದ್ಮ ,ಫಲ ಹಿಡಿದು ನಿಂತಿರುವ ದೇವಿಯರಿದ್ದಾರೆ. ಪ್ರಭಾವಳಿಯಲ್ಲಿ ವ್ಯಾಳ, ಬಳ್ಳಿ ಸುರುಳಿ, ಕೀರ್ತಿಮುಖವಿದೆ. ಇತ್ತೀಚೆಗೆ ಪಂಚಲೋಹದ ಮತ್ತೊಂದು ಪ್ರಭಾವಳಿ ಮಾಡಿಸಿ ನಿಲ್ಲಿಸಲಾಗಿದೆ. ಗರ್ಭಗೃಹದ ಮೇಲ್ಛಾವಣಿಯ ಮಧ್ಯದಲ್ಲಿ ನಕ್ಷತ್ರಾಕಾರವಾಗಿರುವ ಭುವನೇಶ್ವರಿ ಇದೆ. ಇದರ ಮಧ್ಯದಲ್ಲಿ ಮೂರು ಸುತ್ತು ಅರಳಿರುವ ಪದ್ಮ ಪುಷ್ಪವನ್ನು ಬಿಡಿಸಲಾಗಿದೆ. ಗರ್ಭಗೃಹದ ದ್ವಾರದ ಪಟ್ಟಿಕೆಯಲ್ಲಿ ಪದ್ಮಪುಷ್ಪದ ದಳಗಳನ್ನು ಸುತ್ತಲೂ ಬಿಡಿಸಿ ಅಲಂಕರಿಸಲಾಗಿದೆ.

**ಸುಖನಾಸಿ**: ಸುಖನಾಸಿಯು ಗರ್ಭಗೃಹದಷ್ಟೇ ಉದ್ದ ಮತ್ತು ಅಗಲವಾಗಿದ್ದು ಚೌಕಾಕಾರವಾಗಿದೆ. ಇದರ ಮೇಲ್ಛಾವಣಿ ಸರಳವಾಗಿದೆ. ಮಧ್ಯದಲ್ಲಿ ನಕ್ಷತ್ರಾಕಾರವಾಗಿರುವ ಭುವನೇಶ್ವರಿ ರಚಿಸಿ ಅದರ ಮಧ್ಯದಲ್ಲಿ ಮೂರು ಸುತ್ತು ಅರಳಿದ ಪದ್ಮಪುಷ್ಪ ಬಿಡಿಸಲಾಗಿದೆ. ಸುಖನಾಸಿಯ ದ್ವಾರದ ಪಟ್ಟಿಕೆಗಳು ಸರಳವಾಗಿವೆ.

**ನವರಂಗ**: ಈ ದೇವಾಲಯದ ನವರಂಗವು ಸು. 25 x 25 ಅಡಿಗಳ ಉದ್ದ ಮತ್ತು ಅಗಲವಾಗಿದ್ದು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಮೇಲ್ಛಾವಣಿಗೆ ಆಧಾರವಾಗಿರುವ ನಾಲ್ಕು ಹೊಯ್ಸಳ ಶೈಲಿಯಲ್ಲಿರುವ ಕಂಬಗಳಿವೆ. ಇವುಗಳ ಪೀಠ ಚೌಕವಾಗಿ ದಿಂಡಿನ ಭಾಗದಲ್ಲಿ ಬಳೆಗಳ ಅಲಂಕರಣ, ಗಂಟೆಯಾಕಾರ ಮತ್ತು ಕುಂಬಾಕಾರವಾಗಿ ರಚಿಸಲಾಗಿದೆ. ಇದರ ಮೇಲೆ ಗಾಲಿ ಚೌಕಾಕಾರದ ಫಲಗೈ ಮತ್ತು ಅದರ ಮೇಲೆ ಕಪೋತವಿದೆ. ನವರಂಗದ ಮೇಲ್ಛಾವಣಿಯ ಮಧ್ಯದಲ್ಲಿ ಒಂದು ಭುವನೇಶ್ವರಿಯಿದೆ. ಇದನ್ನು ನಕ್ಷತ್ರಾಕಾರವಾಗಿ ರಚಿಸಿ ಮಧ್ಯದಲ್ಲಿ ಅರಳಿದ ಪದ್ಮಪುಷ್ಪವನ್ನು ಬಿಡಿಸಲಾಗಿದೆ. ನವರಂಗದ ದ್ವಾರದ ಪಟ್ಟಿಕೆಗಳಲ್ಲಿ ಯಾವುದೇ ಮಾದರಿಯ ಅಲಂಕರಣದ ಕೆತ್ತನೆ ಕಂಡುಬರುವುದಿಲ್ಲ. ಲಲಾಟಬಿಂಬದಲ್ಲಿ

ಇರಿಸಲಾಗಿದ್ದ ಗಜಲಕ್ಷ್ಮೀ ಶಿಲ್ಪವನ್ನು ದ್ವಾರದ ಎಡಭಾಗದಲ್ಲಿ ಇಡಲಾಗಿದೆ. ನವರಂಗದ ಪಶ್ಚಿಮದ ಭಾಗದಲ್ಲಿ ನಮ್ಮಾಳ್ವರ್‌ಗಳ ಶಿಲ್ಪಗಳಿವೆ.

**ಮುಖಮಂಟಪ**: ನವರಂಗದ ಮುಂದಿರುವ ಮುಖಮಂಟಪದಲ್ಲಿ ಹೊಯ್ಸಳ ಶೈಲಿಯ ಎರಡು ಕಂಬಗಳು, ವಿಜಯನಗರ ಶೈಲಿಯ ಎರಡು ಕಂಬಗಳಿವೆ. ಇವುಗಳ ಮೇಲೆ ಮೇಲ್ಛಾವಣಿ ಇದೆ. ಇದರಲ್ಲಿ ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ಸೋಪಾನಗಳನ್ನು ಮಾಡಲಾಗಿದೆ.

**ಪಾತಾಳಂಕಣ**: ಈ ದೇವಾಲಯದ ಮುಂದೆ ವಿಶಾಲವಾದ ಪಾತಾಳಂಕಣವನ್ನು ಮಾಡಲಾಗಿದೆ. ಇದನ್ನು ವಿಜಯನಗರದ ಕಾಲದಲ್ಲಿ ಮಾಡಿಸಲಾಗಿದೆ. ಇದರಲ್ಲಿ ಸುಮಾರು 18 ಕಂಬಗಳಿವೆ. ಇವುಗಳನ್ನು ಚೌಕ ಅಷ್ಟಮುಖಗಳಂತೆ ರಚಿಸಿ ನಿಲ್ಲಿಸಲಾಗಿದೆ. ಇವುಗಳ ಮೇಲೆ ಕಲ್ಲಿನ ಅಡ್ಡ ಪಟ್ಟಿಕೆಗಳನ್ನು ಹಾಕಿ ಅದರ ಮೇಲೆ ಕಲ್ಲಿನ ಚಪ್ಪಡಿಗಳನ್ನು ಹಾಕಿ ಮುಚ್ಚಲಾಗಿದೆ. ಇದರ ಎಡಭಾಗದಲ್ಲಿ ಒಂದು ಉತ್ಸವ ಮಂಟಪವನ್ನು ಸುಮಾರು ನಾಲ್ಕು ಅಡಿ ಎತ್ತರವಿರುವ ವೇದಿಕೆಯ ಮೇಲೆ 12 ಕಂಬಗಳನ್ನು ನಿಲ್ಲಿಸಿ ಕಟ್ಟಲಾಗಿದೆ.

**ಅಧಿಷ್ಠಾನ**: ಈ ದೇವಾಲಯದ ಅಧಿಷ್ಠಾನವನ್ನು ಚೌಕಾಕಾರ ಮತ್ತು ಆಯತಾಕಾರವಾದ ತಳನಕ್ಷೆಯ ಮೇಲೆ ನಿರ್ಮಿಸಲಾಗಿದೆ. ಅದಿಷ್ಠಾನದಲ್ಲಿ ಐದು ಪಟ್ಟಿಕೆಗಳು ಕಂಡುಬರುತ್ತವೆ. ಅವುಗಳೆಂದರೆ ಉಪಾನ, ಜಗತಿ, ಕುಮುದ, ಪ್ರತಿ ಹಾರವಿದೆ. ಇವುಗಳನ್ನು ಒಳಸರಿದಂತೆ ಮತ್ತು ಹೊರಸರಿದಂತೆ ಭದ್ರವಾಗಿ ಜೋಡಿಸಿ ನಿರ್ಮಿಸಲಾಗಿದೆ.

**ಭಿತ್ತಿ**: ಅಧಿಷ್ಠಾನದ ಮೇಲಿರುವ ಭಿತ್ತಿಯನ್ನು ಅಲ್ಲಲ್ಲಿ ಅರೆಗಂಬಗಳು ಮತ್ತು ಕಲ್ಲಿನ ದಿಮ್ಮಿಗಳನ್ನು ಜೋಡಿಸಿ ನಿರ್ಮಿಸಲಾಗಿದೆ. ಗರ್ಭಗೃಹದ ಮೂರು ಕಡೆ ಭಿತ್ತಿಯ ಉತ್ತರ ಮತ್ತು ದಕ್ಷಿಣದ ಕಡೆ ಕೋಷ್ಠಗಳಿದ್ದಂತೆ ಕಂಡು ಬರುತ್ತದೆ. ಜೀರ್ಣೋದ್ಧಾರ ಸಮಯದಲ್ಲಿ ಅವುಗಳು ವ್ಯತ್ಯಾಸವಾಗಿವೆ. ಆದರೆ ಕೋಷ್ಠಗಳ ಕುರುಹುಗಳು ಕಂಡುಬರುತ್ತವೆ. ಭಿತ್ತಿಯ ಮೇಲಿರುವ ಕಪೋತವು ಭಿತ್ತಿಯಿಂದ ಸು. ಎರಡು ಅಡಿ ಮುಂಚಾಚಿದ್ದು ಇಳಿಜಾರಾಗಿದೆ. ಕಪೋತದ ಅಂಚಿನಲ್ಲಿ ಕೂಡುಗಳನ್ನು ಮಾಡಲಾಗಿದೆ. ಇದರ ಮೇಲೆ ನಿರ್ಮಿಸಲಾಗಿದ್ದು ಮೂಲ ಹಾರ ಈಗ ಕಣ್ಮರೆಯಾಗಿದೆ. ಆದರೆ ಆ ಸ್ಥಳದಲ್ಲಿ ಮೂರು ಅಡಿ ಎತ್ತರವಿರುವ ಕೈಪಿಡಿ ಗೋಡೆ ಇದೆ.

**ಶಿಖರ**: ಗರ್ಭಗೃಹ, ಸುಖನಾಸಿ ಸೇರಿದಂತೆ ಮೇಲೆ ದ್ರಾವಿಡ ಶೈಲಿಯ ಶಿಖರವನ್ನು ಕಟ್ಟಲಾಗಿದೆ. ಇದರಲ್ಲಿ ಮೂರು ತಳಗಳು ಕಂಡು ಬರುತ್ತವೆ. ಕೆಳಗಿನ ತಲಗಳಲ್ಲಿ ಆನೆಗಳು ಒಂದರ ಹಿಂದೆ ಮತ್ತೊಂದು ಚಲಿಸುತ್ತಿರುವಂತೆ ಬಿಡಿಸಲಾಗಿದೆ. ಮಧ್ಯದಲ್ಲಿ ವಿಷ್ಣುವಿನ ಅವತಾರಕ್ಕೆ ಸಂಬಂಧಿಸಿದ ವಾಮನ, ಕಾಳಿಂಗಮರ್ಧನ ವಿಷ್ಣು ಇನ್ನೂ ಮುಂತಾದ ಶಿಲ್ಪಗಳನ್ನು ಗಾರೆಯಲ್ಲಿ ಮಾಡಲಾಗಿದೆ. ಇವುಗಳನ್ನು ಕೋಷ್ಟದ ಒಳಗೆ ಕೀರ್ತಿಮುಖವುಳ್ಳ ಪ್ರಭಾವಳಿ ಮಾದರಿಯಲ್ಲಿ ರಚಿಸಿ ಸುತ್ತಲೂ ಪದ್ಮದ ದಳಗಳನ್ನು

ಬಿಡಿಸಲಾಗಿದೆ. ಇದರ ಮೇಲೆ ಕೀರ್ತಿಮುಖವಿದೆ. ಎರಡನೇ ತಲದಲ್ಲಿ ಕಂಬಗಳ ಸಾಲು ಮಧ್ಯದಲ್ಲಿ ಮಂಟಪಗಳ ರೀತಿ ರಚಿಸಲಾಗಿದೆ. ಅಂಚಿನಲ್ಲಿ ಕೂಡುಗಳ ಅಲಂಕರಣವಿದೆ. ಗ್ರೀವದ ಭಾಗದಲ್ಲಿ ಎರಡು ದೇಹ ಒಂದು ತಲೆಯಿರುವ ಸಿಂಹಗಳನ್ನು ನಾಲ್ಕು ಮೂಲೆಯಲ್ಲಿ ರಚಿಸಲಾಗಿದೆ. ಇದರ ಮೇಲೆ ಸ್ತೂಪಿ ಇದೆ. ಇದನ್ನು ಪದ್ಮ ದಳಗಳ ರೀತಿ ರಚಿಸಿ ಅವುಗಳ ಹೊರಭಾಗದಲ್ಲಿ ಪದಕಗಳ ಮಾದರಿಯ ಅಲಂಕರಣವಿದೆ. ಈ ಸ್ತೂಪಿಯ ನಾಲ್ಕು ದಿಕ್ಕಗಳಲ್ಲಿ ಕೀರ್ತಿಮುಖಗಳಿವೆ. ಇವುಗಳ ಒಳಗೆ ವಿಷ್ಣುವಿನ ಅವತಾರಕ್ಕೆ ಸಂಬಂಧಿಸಿದ ಮತ್ಸ್ಯಾವತಾರ, ನರಸಿಂಹ ಕೂರ್ಮ ಮತ್ತು ವಾಮನರ ಶಿಲ್ಪಗಳನ್ನು ತುಂಬಾ ಸೊಗಸಾಗಿ ಬಿಡಿಸಲಾಗಿದೆ. ಮೇಲೆ ಊರ್ಧ್ವ ಮುಖವಾಗಿ ಬಿಡಿಸಲಾದ ಪದ್ಮ ಪುಷ್ಪ ಮತ್ತು ಅದರ ಮೇಲೆ ಕಳಸವಿದೆ.ಈ ದೇವಾಲಯದ ಪಕ್ಕದಲ್ಲಿ ಸಿದ್ದೇಶ್ವರ ದೇವಾಲಯವನ್ನು ಕಟ್ಟಲಾಗಿದೆ.

**ಛಾಯಚಿತ್ರಗಳು**



**ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಮುನ್ನೋಟ**



**ಲಕ್ಷ್ಮೀನರಸಿಂಹಸ್ವಾಮಿ**



**ನವರಂಗದ ಕಂಬಗಳು**



**ದೇವಾಲಯದ ಪಾರ್ಶ್ವನೋಟ**

**ಪರಮಾರ್ಶನ ಗ್ರಂಥಗಳು**

1. Mysore district gazette 1908
2. ಮಂಜುಳಾ ಹುಲ್ಲಹಳ್ಳಿ – ನಂಜನಗೂಡು ಒಂದು ಸಾಂಸ್ಕೃತಿಕ ಅಧ್ಯಯನ,ಮೈಸೂರು.2000
3. ಡಾ.ಹಾ.ಮಾ.ನಾಯಕ: ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1975
4. ಅಪರ್ಣ.ಕೊ.ಸ– ದೇವಾಲಯ ವಾಸ್ತು ಪರಿಚಯ. ಹಂಪಿ. 1999.
5. ಜಿ. ಮನೋಜ್. ದೇವಾಲಯ ವಾಸ್ತು ವಿಜ್ಞಾನ, ಚಿತ್ರದುರ್ಗ 2015
6. ತಿಪ್ಪೆರುದ್ರಸ್ವಾಮಿ ಹೆಚ್. ಕರ್ಣಾಟಕ ಸಂಸ್ಕೃತಿ ಸಮೀಕ್ಷೆ. ಮೈಸೂರು 2013
7. ಕ್ಷೇತ್ರಕಾರ್ಯದ ವರದಿಯನ್ನುಆಧರಿಸಿ ಬರೆಯಲಾಗಿದೆ.